

ಕರಿಯ ತಲೆ, ಗಾಜುಗಣ್ಣು;
ಬಾಯಲ್ಲಿ ಹೊಗೆ, ಮೂಗಿನಲ್ಲಿ ಕಿಡಿ, 'ರೈಲಿನೆಂಜಿಣ್ಣು!'
ಹರಿಯುತಿದೆ ಗಡಗಡನೆ ಸದ್ದು ಮಾಡಿ,
ದೊಡ್ಡದೊಂದೊನಕೆ ಹುಳು! ಹೊಟ್ಟೆಯೆಲ್ಲಾ ಗಾಡಿ!
ಸಿಳ್ಳು ಹಾಕುತಿದೆ, ಕಿಡಿಯ ಸೂಸುತಿದೆ;
ಹೊಗೆಯನೂದುತಿದೆ; ನುಗ್ಗಿಯೋಡುತಿದೆ!
ಜನರು ಕೂತಿಹರೇನು?
ಸಾಗುತಿಹವೇನು ಸಾಮಾನು?
ಅಲ್ಲ; ರೈಲೋಡುತಿದೆ!
ಮಾನವರೊ? ಸಾಮಾನೊ? ಏನಾದರೇನಂತೆ?
ಯಂತ್ರಕೇಕಾ ಚಿಂತೆ? ಅಂತು ರೈಲೋಡುತಿದೆ!

ಸದ್ದು ಸತ್ತಿತು; ಕಣ್ಣುಮರೆಯಾಯ್ತು ರೈಲು;
ಪ್ರಜ್ಞೆ ತಪ್ಪಿದೆ ಮತ್ತೆ ಬಿಸಿಲಿನಲಿ ಬೈಲು!
ಏನೊಂದು ಕ್ಷಣಕಾಲದಲಿ ಮಿಂಚಿ ಮರೆಯಾಯ್ತು;
ಬಯಲ ನಿದ್ದೆಯು ಕಂಡ ಕೆಟ್ಟ ಕನಸಾಯ್ತು!
ಹಾ! ಕತ್ತರಿಸಿದೊಂದು ನರವೆ ಸಾಕು
ನೆತ್ತರನು ಶೋಷಿಸಲು! ಇನ್ನೇನು ಬೇಕು?
ಈ ಕಬ್ಬಿಣದ ಕಂಬಿದಾರಿ,
ಅಲ್ಲಿ ಮೇಯುವ ದನದ ರಕ್ತವನು ದಿನದಿನವು ಹೀರಿ
ಕೊಂಡೊಯ್ವ ನಾಗರಿಕತೆಯ ನಾಡಿ,
ಎನಲು ನಂಬುವರಾರು? ಆದರೂ ನಂಬದಿರಬೇಡಿ!

ಹದ್ದು ಸತ್ತಿದೆ! ಎಲ್ಲಿ ಹೋಯ್ತೋ ಏನೊ ರೈಲು?
ಮೂರ್ಛೆ ಹೋಗಿದೆ ಮತ್ತೆ ಬಿಸಿಲಲ್ಲಿ ಬೋಳು ಬೈಲು!
ಕರ್ಕಶದ ಕಟುನೀಲ ಕಾಂತಿಯನು ಕಣ್ಗೆ ಕಾರಿ
ಹರಿಯುತಿದೆ, ಹರಿಯುತಿದೆ, ಹರಿಯುತಿದೆ ರೈಲುದಾರಿ.
ಕಂಪಿಸುವ ಕಬ್ಬಿಣದ ಕಂಬಿದಾರಿ!

(1944, ಕೋಗಿಲೆ ಮತ್ತು ಸೋವಿಯಟ್ ರಷ್ಯಾ)



